**ದಿನಾಂಕಃ 13-04-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ. ವೈ.ಹೆಚ್.ಕೆ. ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು ಏನು ತಕರಾರು ಹಾಕಿದ್ದೇನೆಂದು ಮಾಹಿತಿ ಇದೆ. ದಾವಾದ ಎಲ್ಲಾ ಆಸ್ತಿಗಳು ನಮ್ಮ ಹೆಸರಿನಲ್ಲಿದ್ದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ಮೃತಪಟ್ಟಾಗ ದಾವಾ ಆಸ್ತಿಗಳು ಅವರ ಹೆಸರಿನಲ್ಲಿದ್ದವು ಎಂದರೆ ಸರಿ. 21 ಗುಂಟೆ ಎನ್ ಎ ಸೈಟುಗಳು, 4 ಗುಂಟೆ ಬಿಳುಜಾಗ, 1 ಕಟ್ಟಿದ ಮನೆ ಇತ್ತು. 21 ಗುಂಟೆ ಎನ್ ಎ ಸೈಟುಗಳಲ್ಲಿ 12 ಸೈಟುಗಳನ್ನು ಮಾಡಿದ್ದರು. ಅವುಗಳು ಒಂದೊಂದು ಎಷ್ಟೆಷ್ಟು ವಿಸ್ತೀರ್ಣ ಇದ್ದವು ಎಂದು ಗೊತ್ತಿಲ್ಲ. 4 ಗುಂಟೆ ಬಿಳು ಜಾಗ ಎಂದು ಇದೆ. ಅದು ನಮ್ಮ ತಾಯಿ ಹೆಸರಿನಲ್ಲಿತ್ತು. ನಮ್ಮ ತಾಯಿ ತೀರಿದ ನಂತರ ನಮ್ಮ 3 ಜನ ಅಣ್ಣ ತಮ್ಮಂದಿರ ಹೆಸರಿಗೆ ಇದ್ದವು. ಸರ್ವೆ ನಂ.31/2+3 ಇದರಲ್ಲಿ  ಆ ಗುಂಟೆ ಆಸ್ತಿ ಇದೆ. ಅದರಲ್ಲಿ ನಮ್ಮ ಚಿಕ್ಕಪ್ಪಂದಿರ ಆಸ್ತಿ ಸಹ ಇದೆ. ಅದರಲ್ಲಿ ನಾವು 3 ಜನ ಅಣ್ಣ ತಮ್ಮಂದಿರಗೆ ಹಂಚಿಕೆ ಆದಂತೆ ಯಾವುದೇ ಊತಾರ ಇಲ್ಲ. ನಮ್ಮ ಅಣ್ಣ ಜಬೀವುಲ್ಲಾ ನಮ್ಮ ಅಕ್ಕ ತಂಗಿಯರ ಮದುವೆಗಾಗಿ 5 ಸೈಟುಗಳನ್ನು ಮಾರಾಟ ಮಾಡಿದ್ದರು. ಪ್ಲಾಟ್ ನಂಬರುಗಳು ಮತ್ತು ಯಾರಿಗೆ ಮಾರಿದ್ದಾರೆ ಎಂದು ಗೊತ್ತಿಲ್ಲ. ಈಗ ನನ್ನ ಹೆಸರಿನಲ್ಲಿ ಯಾವುದೇ ಸೈಟುಗಳು ಇಲ್ಲ. ನಮ್ಮ ಜಬೀವುಲ್ಲಾ, ಶೌಕತ ಅಲಿ ಹೆಸರಿನಲ್ಲಿ ಸೈಟುಗಳು ಇರಬಹುದು.

2. ನಾನು 4 ವರ್ಷದವನು ಇದ್ದಾಗ ವಾದಿಯ ಮದುವೆ ಆಗಿದೆ. ನಮ್ಮ ತಂದೆ ತೀರಿಕೊಂಡಾಗ ನನಗೆ 3 ವರ್ಷ ವಯಸ್ಸು ಇತ್ತು. ನಮ್ಮ ಅಕ್ಕ ನಮ್ಮನ್ನು ಕರೆದುಕೊಂಡು ಹೋಗಿ ಜೋಪಾನ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಅಣ್ಣ ಮತ್ತು ನನ್ನ ತಾಯಿ ಮಾಡಿದ್ದಾರೆ. ನಮ್ಮ ಅಕ್ಕ 5 ಗುಂಟೆ ಜಾಗೆಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ವಿಪಿಸಿ ನಂ.145 ಇದು ಊರಿನಲ್ಲಿದ್ದ ಹಳೇ ಮನೆಯಲ್ಲಿ ನಾವು ಇದ್ದೇವು. ವಾದಿಯು ನನ್ನನ್ನು ಜೋಪಾನ ಮಾಡಿದ್ದರು ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೊಡ್ಡವನಾದ ನಂತರ ವಾದಿಯೇ ಹೆಣ್ಣು ಹುಡುಕಿ ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಮದುವೆಗೆ ಅಣ್ಣ ತಮ್ಮಂದಿರು ಸಹಾಯ ಸಹಕಾರ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಅಕ್ಕ ಒಬ್ಬಳೇ ಮಾಡಿದ್ದಾಳೆ ಎಂದರೆ ಸರಿಯಲ್ಲ. ನಮ್ಮ ಮಗುವಾದ ನಂತರ ಅದಕ್ಕೆ ನಾಮಕರಣ, ಇತರೆ ಕಾರ್ಯಕ್ರಮಗಳನ್ನು ವಾದಿಯೇ ಮಾಡಿದ್ದಾರೆ ಎಂದರೆ ಸರಿಯಲ್ಲ.

3. ನಾನು ಮದುವೆ ಆದ ನಂತರ ಟೈಲರಿಂಗ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ವ್ಯಾಪಾರಕ್ಕಾಗಿ ನನ್ನ ಅಕ್ಕ ಹಣದ ಸಹಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಜೀವನದಲ್ಲಿ ಸೆಟಲ್ ಆದ ನಂತರ ನನ್ನ ಕುಟುಂಬದೊಂದಿಗೆ ಪ್ರತ್ಯೇಕವಾಗಿ ವಾಸವಾಗಿದ್ದೇನೆ ಎಂದರೆ ಸರಿ. ನಾನು ತಾಯಿಯ ಜೊತೆ ಸೈಟಿನಲ್ಲಿ ಕಟ್ಟಿಕೊಂಡ ಮನೆಯಲ್ಲಿ ವಾಸವಾಗಿದ್ದೇನೆ. 712/2 ಎ ದಲ್ಲಿ ನನಗೆ ಸೈಟು ಬಂದಿತ್ತು ಅದರಲ್ಲಿ ನಾನು ಮನೆ ಕಟ್ಟಿಕೊಂಡಿದ್ದೇನೆ. ವಿಭಾಗ ಆಗುವ 2-3 ವರ್ಷಗಳ ಮೊದಲು ಮನೆ ಕಟ್ಟಿಕೊಂಡಿದ್ದೇನೆ. 1982-83 ರಲ್ಲಿ ಮನೆ ಕಟ್ಟಿರಬಹುದು. ನನ್ನ ಹುಟ್ಟಿದ್ದ ವರ್ಷ 1974 ಇರುತ್ತದೆ. ಮನೆ ಕಟ್ಟಿದಾಗಿನಿಂದ ನಮ್ಮ ತಾಯಿ ಜೊತೆಯಲ್ಲಿ ಆ ಮನೆಯಲ್ಲಿ ವಾಸವಾಗಿದ್ದೇನೆ. ಈ ಎಲ್ಲಾ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿ ಪಿ ಸಿ ನಂ.702/12 ಎ ದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ಆ ಆಸ್ತಿ ನನಗೆ ವಾಟ್ನಿ ಮೂಲಕ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1986 ರಲ್ಲಿ ವಾಟ್ನಿ ಮಾಡಿಕೊಂಡಿದ್ದೇವೆ. ಆಗ ನಾನು ಚಿಕ್ಕವನಿದ್ದಾಗ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಅದಕ್ಕೆ ಯಾರೆಲ್ಲ ಸಹಿ ಮಾಡಿದ್ದಾರೆ, ಯಾರು ಪತ್ರ ಬರೆದಿದ್ದಾರೆ, ಯಾರ ಹೆಸರುಗಳು ಇವೆ ಎಂದು ಗೊತ್ತಿಲ್ಲ.

4. ಆ ಪತ್ರಕ್ಕೆ ವಾದಿ ಮತ್ತು ನಮ್ಮ ಉಳಿದ ಅಕ್ಕ ತಂಗಿಯರು ಸಹಿ ಮಾಡಿದ್ದಾರೆ. ಆ ಪತ್ರ ನೊಂದಣಿ ಆಗಿದೆ ಎಂದು ಗೊತ್ತು. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಮ್ಮ ತಂದೆಯ ಆಸ್ತಿಯಲ್ಲಿ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಯಾವುದೇ ವಾಟ್ನಿ ಪತ್ರ ಬರೆದಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಎಲ್ಲಾ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಊರಿನಲ್ಲಿದ್ದ ಆಸ್ತಿ 3 ಹಿಸ್ಸೆ ಆಗಿತ್ತು. ಅದರಲ್ಲಿ ನನಗೆ, ಶೌಕತ್ ಅಲಿ, ಜಬೀವುಲ್ಲಾ ಗೆ ಆಸ್ತಿ ಬಂದಿತ್ತು. ಉಳಿದ ಆಸ್ತಿಗಳ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಸರ್ವೆ ನಂ.31/1+2+3 ಇದು ವಾಟ್ನಿ ಪ್ರಕಾರ ನನಗೆ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಜನೇವರಿ 2016 ರಲ್ಲಿ ನಾನು ನನ್ನ ಪಾಲಿಗೆ ಬಂದ ಆಸ್ತಿಯನ್ನು ನಾನು 10 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ. ಖರೀದಿ ಆಗುವ 1 ತಿಂಗಳ ಮೊದಲು ನಮ್ಮ ಮನೆಯಲ್ಲಿ ಮಾತುಕತೆಯಾಗಿತ್ತು. ಅದನ್ನು ರೂ.5,10,000/- ರೂ.ಗೆ ಮಾರಾಟ ಮಾಡಿದ್ದೇನೆ. ಆ

ಸಮಯದಲ್ಲಿ ಜಿಕ್ರಿಯಾ ಅಬು ಸಾಲಿಯಾ ಮತ್ತು ನಮ್ಮ ಅಣ್ಣ ಇವರನ್ನು ಬಿಟ್ಟು ಬೇರೆ ಯಾರು ಮಾತುಕತೆ ಸಮಯದಲ್ಲಿ ಇರಲಿಲ್ಲ. ಮಾತುಕತೆಯ ಸಮಯ ನನಗೆ ನೆನಪಿಲ್ಲ. ರೂ.5,10,000/- ಗಳನ್ನು ಖರೀದಿ ಕೊಡುವ ಕಾಲಕ್ಕೆ ಒಮ್ಮೆಲೆ ಕೊಡಬೇಕು ಎಂದು ಮಾತುಕತೆಯಾಗಿತ್ತು. ಆ ದಿನ ಯಾವುದೇ ಸಂಚುಕಾರ ಪತ್ರ ಬರೆದಿಲ್ಲ. ಮಾತುಕತೆಯಾದ ದಿನಾಂಕ ನೆನಪಿಲ್ಲ. ಮಾತುಕತೆಯಾದ ಒಂದು ತಿಂಗಳಿಗೆ ಖರೀದಿಯಾಗಿದೆ. ಖರೀದಿ ಜನೇವರಿ 2016 ರಲ್ಲಿ ಆಗಿದೆ. ಆ ಕಾಲಕ್ಕೆ ನನ್ನ ಹೆಂಡತಿ, ನಮ್ಮ ಅಣ್ಣ ಜಬಿವುಲ್ಲಾ, ಅಬುಸಲಂ ಅವರನ್ನು ಬಿಟ್ಟರೇ ಬೇರೆ ಯಾರು ಸಹ ವ್ಯವಹಾರದಲ್ಲಿ ಇರಲಿಲ್ಲ. ಖರೀದಿ ಕಾಲಕ್ಕೆ ರೂ.5,10,000/- ರೂ. ತೆಗೆದುಕೊಂಡಿದ್ದನು.

6. 10 ನೇ ಪ್ರತಿವಾದಿ ನನಗೆ ಖಾಸಾ ಸ್ನೇಹಿತ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿಯು ನನಗೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬಾರದು ಎನ್ನುವ ಉದ್ದೇಶದಿಂದ ಒಂದು ತೋರುಗಾಣಿಕೆ ಖರೀದಿ ಪತ್ರ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಾಟ್ನಿಯಾದ ವಿಷಯ ಮತ್ತು ನಾನು 10 ನೇ ಪ್ರತಿವಾದಿಗೆ ಖರೀದಿ ಕೊಟ್ಟ ವಿಷಯ ವಾದಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. 10 ನೇ ಪ್ರತಿವಾದಿ ವಾದಿಗೆ ತೊಂದರೆ ಕೊಟ್ಟ ನಂತರ ನಾನು ಮಾರಾಟ ಮಾಡಿರುವುದು ವಾದಿಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ಸೈಟುಗಳನ್ನು ಖರೀದಿಸಿದವರನ್ನು ವಾದಿಯು ಪಾರ್ಟಿ ಮಾಡಿಲ್ಲ. ವಾಟ್ನಿ ಪ್ರಕಾರ ಖಾತೆ ಬದಲಾವಣೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎಲ್ಲರ ಸಮ್ಮತಿ ಮೇರೆಗೆ ವಾಟ್ನಿ ಮಾಡಿಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂ.79/2012 ರಲ್ಲಿ ವಾದಿಗೆ ಸಮನ್ಸ ಹೋಗಿಲ್ಲ ಎಂದರೆ ಸರಿಯಲ್ಲ. ಅವರು ಕೋರ್ಟಗೆ ಹಾಜರು ಆಗಿಲ್ಲ ಯಾರಿಗೂ ವಕಾಲತ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

7. ವಾದಿಗೆ ಹಾನಿ ಮಾಡುವ ಉದ್ದೇಶದಿಂದ ಆಕೆಯ ಹೆಸರಿನಲ್ಲಿ ತಕರಾರು ಹಾಕಿಸಿದ್ದೇವೆ ಎಂದರೆ ಸರಿಯಲ್ಲ. ಅದಕ್ಕೆ ವಾದಿಯ ಸಹಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಆದರೆ ಕೋರ್ಟಗೆ ಬಂದು ಹೋಗಿ ಮಾಡಿದ್ದಾರೆ. ವಾದಿಗೆ ನಾವು ತೊಂದರೆ ಮಾಡಿದ ನಂತರ ದಾವೆ ಹಾಕಿದ್ದು ಆಕೆಗೆ ಗೊತ್ತಾಗಿದೆ ಎಂದರೆ ಸರಿಯಲ್ಲ. ಆ ದಾವೆ ವಜಾ ಆಗಿದೆ ಎಂದರೆ ಸರಿ. ಆ ದಾವೆಯನ್ನು ವಾದಿಯ ಕಬ್ಜೆ ತಪ್ಪಿಸಬೇಕು ಎಂದು ಹಾಕಿದ್ದೇನೆ ಎಂದರೆ ಸರಿಯಲ್ಲ.

ಇವತ್ತಿಗೂ ವಾದಿಯೇ ದಾವಾ ಆಸ್ತಿಯ ವಿಪಿಸಿ ನಂ. 702/12 ಎ ದಲ್ಲಿ ವಾಸವಾಗಿದ್ದಾಳೆ ಎಂದರೆ ಸರಿಯಲ್ಲ. ನಾನು ಅಲ್ಲಿ ಇದ್ದ ಬಗ್ಗೆ ಕರೆಂಟ್ ಬಿಲ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿ ಪಿ -37 ಎ ರಲ್ಲಿರುವ ಮನೆ ವಿಪಿಸಿ ನಂ.702/12 ಎ ಎಂದರೆ ಸರಿಯಲ್ಲ. ನಿ ಪಿ -37 ರಲ್ಲಿರುವ 1 ಮತ್ತು 2 ನೇ ಫೋಟೋಗಳು ಆ ಮನೆಯ ಫೋಟೋಗಳು ಎಂದರೆ ಸರಿಯಲ್ಲ. ನಿ ಪಿ -37 ರಲ್ಲಿರುವ 13 ಫೋಟೋಗಳು ಸಹ ಆ ಆಸ್ತಿಗೆ ಸಂಬಂದಿಸಿದ್ದು ಅಲ್ಲ. ಆ ಮನೆಗೆ ವಿದ್ಯುತ್ ಸಂಪರ್ಕ ಇದೆ ಎಂದರೆ ಸರಿ. ಆ ಮನೆಗೆ ನಿ ಪಿ -15 ರಂತೆ ಮೀಟರ್ ನಂಬರ್ ಇದೆ ಎಂದರೆ ಸರಿ.

8. ನಿ ಪಿ -15 ರಲ್ಲಿರುವ ಎಲ್ಲಾ ಬಿಲ್ಲುಗಳು ವಿಪಿಸಿ ನಂ.702/12 ಎ ಇದಕ್ಕೆ ಸಂಬಂದಿಸಿದ್ದು ಎಂದರೆ ಸರಿ. ನಾನು 2016 ರಲ್ಲಿ ಮನೆ ಮಾರಾಟ ಮಾಡಿದ್ದೇನೆ ಅದಾದ ನಂತರ ಏನಾಯಿತು ಎಂದು ನನಗೆ ಗೊತ್ತಿಲ್ಲ. ಆ ಪತ್ರಗಳಲ್ಲಿ ತುಂಗಭದ್ರ ಭಡಾವಣೆ ಎಂದು ಬರೆದಿದೆ ಎಂದರೆ ಸರಿ. ಅದರಲಿ ಎಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ತಕರಾರು ಮಾಡಿದ ನಂತರ ವಾದಿ ಕೆ ಇ ಬಿ ಗೆ ದೂರು ಕೊಟ್ಟಿದ್ದಳು ಎಂದರೆ ಸರಿಯಲ್ಲ ಅದಕ್ಕೆ ಅವರು ಆ ವಿಳಾಸಕ್ಕೆ ಪತ್ರ ಬರೆದಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ವಾದಿಯ ಹಕ್ಕು ನಷ್ಟ ಮಾಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ಆಸ್ತಿಯಲ್ಲಿ ಯಾವುದೇ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ನಾವೆಲ್ಲರೂ ಒಂದು ವಿಭಾಗ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಜೆ.ವಿ.ಕುಲಕರ್ಣಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.